ತಾರೀಖು 20ನೆ ಮಾರ್ಚಿ 1907.

ನಂ. 8629—ಸ್ಯಾನಿಟರಿ. 170-06—18, ಮೈಸೂರು ಡಿಸ್ಟ್ರಿಕ್ಟ್ಸ್ ಪ್ರೆಂಚೈಸ್ ಸಬ್ ತಾಲ್ಲೂಕಿನ ಮೇಲ್ಕೋಟೆಗೆ ಶ್ರೀ ರಾಮಾನುಜಾಚಾರ್ಯರವರ ತಿರುನಕ್ಷತ್ರ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀವರ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ಸಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತನಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀವರ್ಮ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರಿಲ್ 9ನೆ ತಾರೀಖಿನಿಂದ ಅದೇ ತಿಂಗಳು 20ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇನ್ಸ್ಟ್ರುಮೆಂಟಿಗೆ ವಿರೋಧವಾಗಿ ಮೇಲ್ಕಂಡ ತಿರುನಕ್ಷತ್ರಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8631—ಸ್ಯಾನಿಟರಿ 66-06—38, ಸರ್ವಸ್ತ ಜನರ ತಿಳಿವಳಿಕೆಯ ಬ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇನ್ಸ್ಟ್ರುಮೆಂಟುಗಳ ಮೂಲಕ ಪ್ರಕಟಪಡಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಚಟ್ನಹಳ್ಳಿ	ಆಲೂರು ಸಬ್ ತಾಲ್ಲೂಕು.

ತಾರೀಖು 7ನೆ ಮಾರ್ಚಿ 1907.

ನಂ. 7847—ಮೆಡಿಕಲ್ 8-06—13, ಆಸ್ಪತ್ರೆ ಅಸಿಸ್ಟೆಂಟ್ ಎಂ. ಶ್ರೀನಿವಾಸರಾಯರು 2ನೆ ತರಗತಿಯಲ್ಲಿ 7 ವರ್ಷ ಕಾಲ ಪೂರ್ತಿಯಾಗಿ ಕೆಲಸ ಮಾಡಿ ಯೋಗ್ಯತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆಯಾಗಿ, ಅವರಿಗೆ 1907ನೆ ಇಸವಿ ಜನವರಿ 2ನೆ ತಾರೀಖಿನಿಂದ ಮೊದಲನೆ ತರಗತಿಗೆ ಬಡತಿ ಕೊಟ್ಟಿದೆ.

ತಾರೀಖು 13ನೆ ಮಾರ್ಚಿ 1907.

ನಂ. ಜೆ. 5601—ಜಿ. ಎಂ. 88-06—18, ಮೈಸೂರು ಶ್ರೀವರ್ಮ ಮಹಾರಾಜರವರ ಪ್ರೈವೇಟ್ ಸೆಕ್ರಿಟರಿಗಳಾದ ಮಿ॥ ಇ. ವೆಂಕಾನಿಕಿ ಐ.ಸಿ.ಎಸ್., ರವರಿಗೆ, 1906ನೆ ಇಸವಿ ಸೆಪ್ಟಂಬರ್ 14ನೆ ತಾರೀಖಿನ ಜಿ. 1881—ಜೆ. ಎಂ. 88-06—5ನೆ ನಂಬರಿನ ಸರ್ಕಾರಿ ಇನ್ಸ್ಟ್ರುಮೆಂಟಿಯಲ್ಲಿ ಕೊಟ್ಟ ಮೂರು ತಿಂಗಳ ಪ್ರಿವಿಲೇಜು ರಜಾವಿನೊಂದಿಗೆ ಮೂರು ತಿಂಗಳ ಸ್ಪೆಷಲ್ ಯಾ ವಿಶೇಷತರಹದ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 14ನೆ ಮಾರ್ಚಿ 1907.

ನಂ. ಜೆ. 5639—ಜಿ. ಎಂ. 232-06—9, ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮತ್ತು 371 ಎಕರೆ ಗಳು 16 ಗುಂಟೆಗಳ ಅಂದಾಜು ವಿಸ್ತೀರ್ಣವುಳ್ಳ ಜಮೀನುಗಳು ಗತಿಸಿದ ಮಿ॥ ಜೆ. ಎಲ್. ತಾತಾಮುವರ ಹೆಸರಿನಿಂದ ಕೂಡಿರುವ "ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್" ಯಾ ಇಂಡಿಯಾ ದೇಶದ ಶಾಸ್ತ್ರಾಲಯವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಬೇಕಾಗಿರುವದರಿಂದ,

ಮೈಸೂರು ಶ್ರೀಮನ್ಮಹಾರಾಜರವರು, ಸದರಿ ಜಮೀನುಗಳ ಸಂಪೂರ್ಣವಾದ ಆಡಳಿತವನ್ನೂ ಅವುಗಳ ಮೇಲಿನ ಸಂಪೂರ್ಣವಾದ ನ್ಯಾಯಾಧಿಕಾರವನ್ನೂ, ಸದರಿ ಜಮೀನುಗಳು ಮೇಲ್ಕಂಡ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುವ ಪರ್ಯಂತ, ಸಳ್ಳಾ ಸಮೇತರಾದ ಇಂಡಿಯಾ ಗವರ್ನರ್ ಜನರಲ್‌ರವರಿಗೆ 1907ನೆ ಇಸವಿಯ ಮಾರ್ಚಿ 14ನೆ ತಾರೀಖಿನ ಲಾಗಾಯಿತು ಒಪ್ಪಿಸಲು ಹುಕುಂ ದಯಪಾಲಿಸಿರುತ್ತಾರೆ.

ವಿ. ಪಿ. ಮಾಧವರಾವ್,
ಮೈಸೂರು ಸೀಮೆಯ ದೀವಾನರು.

ಇಂಡಿಯಾ ದೇಶದ ಶಾಸ್ತ್ರಾಲಯಕ್ಕೋಸ್ಕರ ಕೊಡಲ್ಪಟ್ಟ ಜಮೀನುಗಳ ಚತುರ್ಗಡಿಗಳ ಪಟ್ಟಿಯಾ ಷೆಡ್ಯೂಲ್.

ಕೆಳಗೆ ವಿವರಿಸಿರುವ ಚತುರ್ಗಡಿಗಳಲ್ಲಿ ಅಡಗಿರುವ ಮತ್ತು ಬೆಂಗಳೂರು ಸ್ಯಾಂಕಿ ಕೆರೆಗೆ ನೀರು ಉರುಳಿ ಬರುವ ಪ್ರದೇಶದ ಭಾಗವಾದ ಜಮೀನುಗಳು :—

ಪೂರ್ವಕ್ಕೆ ಮೇರೆಯು ರೇಖೆಯು ಸ್ಯಾಂಕಿ ಕೆರೆಯ (ಪೋರ್ಟೂಷೆಡ್) ಯಾ ದೋಣಿಗಳನ್ನಿಡುವ ಗುಡಿಸಿಲಿನ ಉತ್ತರಕ್ಕೆ ನಾಲೆಯು ಕೆರೆಯಂಗಳವನ್ನು ಸೇರುವ ಸ್ಥಳದಿಂದ ಹೊರಟು, ತರುವಾಯ ಸ್ಯಾಂಕಿಕೆರೆಯಂಗಳದೊಂದಿಗೆ ಉತ್ತರಕ್ಕೆ ಹೋಗಿ, "ಬಿಟ್ಟಿ" ಯೂ ಗುರಿ ಹಲಿಗೆಗಳಿರುವ ಸ್ಥಳದಿಂದ ತುಮಕೂರು ರಸ್ತೆಗೆ ಹೋಗುವ ರಸ್ತೆಯನ್ನು ದಾಟಿ, ಈ ರಸ್ತೆಯ ಮೇಲ್ಭಾಗದಲ್ಲಿಯೇ ಸದರಿ ಕೆರೆಗೆ ನೀರು ಬರುವ ಕಾಲಿವೆಯನ್ನು ಸೇರುತ್ತದೆ. ಆಮೇಲೆ ಈ ಕಾಲಿವೆಯೇ ಪೂರ್ವ ದಿಕ್ಕಿನಲ್ಲಿ ಉಳಿದ ಭಾಗಗಳಿಗೂ, ಉತ್ತರಕ್ಕೂ ಮತ್ತು ಪಶ್ಚಿಮಕ್ಕೂ ಮೇರೆಯಾಗಿ, ಶ್ರೀಮನ್ಮಹಾರಾಜರವರ (ಹತ್ತಿ) ಕಾರ್ಖಾನೆಗಳ ಹಿಂಭಾಗದಲ್ಲಿ ಹೋಗುವ ಹಳೆ ತುಮಕೂರು ರಸ್ತೆಯನ್ನು ಸೇರುವ ವರೆಗೆ ಹೋಗುತ್ತದೆ. ದಕ್ಷಿಣದ ಮೇರೆಯು, ಸ್ಯಾಂಕಿ ಕೆರೆಯ ಮೇಲಿನ ರಸ್ತೆಯು ಈಗಿನ ತುಮಕೂರು ರಸ್ತೆಗೆ ಸೇರುವವರೆಗೆ ಅದರೊಂದಿಗೆ ಹೋಗಿ ಅಲ್ಲಿಂದ ಹಳೇ ತುಮಕೂರು ರಸ್ತೆಗೆ ಸೇರುವುದಕ್ಕೆ ಹಾಕಬೇಕೆಂದು ಉದ್ದೇಶಿಸಿರುವ ರಸ್ತೆಯೊಂದಿಗೆ ಹೋಗುತ್ತದೆ.